ಶ್ರೀ ಸಿ. ಆರ್. ಮಹಮ್ಮದ ಸೈಫುದ್ದೀನ.—ನಿವೇಶನದ ಅಯ್ಯೆಯನ್ನು ಯಾವಾಗ ಅಂತಿಮಗೊಳಿಸಲಾಗುತ್ತದೆಂಬುದನ್ನು ಹೇಳುತ್ತೀರಾ ?

†ಶ್ರೀ ಅಜೀಜ ಸೇಟ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಕೆಲವು ತಿಂಗಳ ಹಿಂದೆ ನಾನು ಚಿತ್ರದುರ್ಗಕ್ಕೆ ಹೋದಾಗ ತಮ್ಮ ಜೊತೆಯಲ್ಲಿ ಮತ್ತು ಅಧಿಕಾರಿಗಳ ಜೊತೆಯಲ್ಲಿ ರೈಲ್ವೆ ಸ್ಟೇಷನ ಹತ್ತಿರವಿರುವ ಜಾಗಕ್ಕೆ ಹೋಗಿ ನೋಡಿ, ಆ ಜಾಗವನ್ನು ತೀರ್ಮಾನ ಮಾಡಿಕೊಂಡು ಬಂದಿದ್ದೇವೆ. ಆ ಜಾಗದಲ್ಲಿ ಬಸ್‌ಸ್ಟ್ಯಾಂಡ ಮತ್ತು ಡಿಪೋವನ್ನು ಕಟ್ಟಬೇಕೆಂಬ ಬಗ್ಗೆ ಮಾತುಕತೆ ನಡೆದಿದೆ. ಈಗ ಆ ವಿಷಯ ಬೋರ್ಡಿನ ಮುಂದೆ ಇದೆ. ಅವರು ತೀರ್ಮಾನ ತೆಗೆದುಕೊಂಡ ತಕ್ಷಣ ಆ ಜಾಗದಲ್ಲಿ ಬಸ್‌ಸ್ಟ್ಯಾಂಡ ಕಟ್ಟಿಸಿಕೊಡುತ್ತೇವೆ.

ಶ್ರೀ ಸಿ. ಆರ್. ಮಹಮ್ಮದ ಸೈಫುದ್ದೀನ.—ಈಗ ಅಲ್ಲಿಂದ ಬೊಂಬಾಯಿ ಕನಕ ಹೋಗುವವರಿಗೆ ಯಾವ ಅನುಕೂಲಗಳು ಇಲ್ಲದಿರುವದರಿಂದ ಈ ಕೆಲಸವನ್ನು ಮಾಡಿಸಿಕೊಡುವ ಬಗ್ಗೆ ಟೈಮು ಲಿಮಿಟ್ ಏನಾದರೂ ಇದೆಯೇ ?

ಶ್ರೀ ಅಜೀಜ ಸೇಟ.—ಈ ಕಾರಣದಿಂದಲೇ, ಅದು ನಾಷನಲ್ ಹೈವೇ ಇರುವದರಿಂದ, ಮುಂಬೈ ಮತ್ತು ಗೋವಾದಿಂದ ಬರುವವರಿಗೆ ಅನುಕೂಲ ಇಲ್ಲದಿರುವದರಿಂದ, ಗೆಸ್ಟಹೌಸ ಮತ್ತು ಬಸ್‌ಸ್ಟ್ಯಾಂಡ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬ ಸಲಹೆಯನ್ನು ಒಪ್ಪಿಕೊಂಡು ಅದರ ಬಗ್ಗೆ ಕ್ರಮ ತೆದುಕೊಳ್ಳುತ್ತಿದ್ದೇವೆ. ಅದು ಆಗುವ ವರೆಗೆ ದಯಮಾಡಿ ತಾವು ತಡೆದುಕೊಳ್ಳಬೇಕಾಗುತ್ತದೆ.

## VANI VILAS SAGAR AS TOURIST CENTRE

322. Sri C. R. MOHAMED SAIFUDDIN (Chitradurga).—Will the Minister for Labour be pleased to state :—

a) whether Vani Vilas Sagar has been considered as a Tourist Centre ; if so the steps taken by the Government to improve it ;

b) whether Government intends to electrify the Vani Vilas Sagar Dam ;

c) whether there is any proposal to convert the waste land in the Vani Vilas Sagar Dam area into a garden ?

Sri AZEEZ SAIT (Minister for Labour).—

a) Yes. A Tourist Home has been built for the use of Visitors.

b) Yes.

c) Yes.

ಶ್ರೀ ಸಿ. ಆರ್. ಮಹಮ್ಮದ ಸೈಫುದ್ದೀನ.—ವಾಣಿ ವಿಲಾಸ ಸಾಗರವನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡಲು, ಆಣೆಕಟ್ಟನ್ನು ವಿದ್ಯುತ್ತೀಕರಣಗೊಳಿಸಲು ಮತ್ತು ಅಲ್ಲಿ ಸಣ್ಣ ಉದ್ಯಾನವನವನ್ನು ಮಾಡಲು ಇಲ್ಲಿಯ ವರೆಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಅಜೀಜ ಸೇಟ.—ಇಲ್ಲಿಯ ವರೆಗೆ ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲಿ ಮಿನೇಜರ ಬೃಂದಾವನ ಮಾಡಬೇಕೆಂದು, ಅದನ್ನು ಜನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆ. ಇದನ್ನು ಮೈಸೂರು ಸಿಟಿಯ ಬೃಂದಾವನ ದಲ್ಲಿರುವಂತೆ ಮಾಡಿದರೆ ಉತ್ತರ ಭಾಗದ ಜನರಿಗೆ ಒಂದು ಒಳ್ಳೆಯ ಪ್ರವಾಸಿ ಕೇಂದ್ರದ ಅನುಕೂಲ ಸಿಗುತ್ತದೆಂಬ ಕಾರಣದಿಂದ ಇದನ್ನು ಶೀಘ್ರದಲ್ಲಿಯೇ ಮಾಡಬೇಕೆಂದಿದ್ದೇವೆ. ಆದರೆ ಸಮಯ, ಸಂದರ್ಭ, ಹಣಕಾಸಿನ ಅನುಕೂಲ ನೋಡಿಕೊಂಡು ಇದನ್ನು ಮಾಡುತ್ತೇವೆ.

ಶ್ರೀ ಸಿ. ಆರ್. ಮಹ್ಮದ ಸೈಫುದ್ದೀನ.— ಅಲ್ಲಿ ಒಂದು ಪ್ರವಾಸಿ ಗೃಹ ವೊಂದನ್ನು ೩–೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೨ ವರ್ಷದ ಹಿಂದೆಯೇ ಕಟ್ಟಿಸಿದರೂ ಸಹ ಅಲ್ಲಿಗೆ ಹೋಗಲು ಅಪ್ರೋಚ ರೋಡ ಇಲ್ಲವಾಗಿದೆ. ಇದನ್ನು ಮಾಡುವ ಅಭಿಪ್ರಾಯವಿದ್ದರೆ ಯಾವಾಗ ಮಾಡುತ್ತೀರಿ ?

ಶ್ರೀ ಅಜೀಜ ಸೇಟ.—ಇಲ್ಲಿಯ ವರೆಗೆ ನಿಧಾನವಾಗಿದ್ದು ದುರಾದೃಷ್ಟ. ಇನ್ನು ತಡವಾಗದಂತೆ ಆ ರಸ್ತೆಯನ್ನು ಶೀಘ್ರದಲ್ಲಿ ಮಾಡಿಸಲು ನಾನು ಲೋಕೋಪಯೋಗಿ ಇಲಾಖೆಯ ಸೆಕ್ರೆಟರಿಯವರ ಮತ್ತು ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ವಾಣಿ ವಿಲಾಸ ಸಾಗರದಲ್ಲಿ ಪ್ರವಾಸೀ ಕೇಂದ್ರ ಮಾಡಲು ಏನೇನು ಸೌಲಭ್ಯಗಳು ಇವೆಯೋ ಅದೇ ಸೌಲಭ್ಯ ಬೇರೆ ಕಡೆಗಳಲ್ಲಿ ಇದ್ದರೆ ಅಲ್ಲಿಯೂ ಸಹ ಪ್ರವಾಸೀ ಕೇಂದ್ರಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ ಸೇಟ.—ಮೈಸೂರು ರಾಜ್ಯದಲ್ಲಿ ಸಾಕಷ್ಟು ಟೂರಿಸ್ಟ ಪೊಟೆನ್ಸಿಯಾಲಿಟೀಸ್ ಇದೆ. ಅದನ್ನು ಎಕ್ಸಪ್ಲಾಯಿಟ್ ಮಾಡುವುದಕ್ಕೆ ಟೂರಿಸ್ಟ ಡಿಪಾರ್ಟ್‌ಮೆಂಟನ್ನು ಬೈಫರಕೇಟ್ ಮಾಡಬೇಕೆಂಬ ವಿಚಾರ ಈಗ ಕ್ಯಾಬಿನೆಟ್ ಮುಂದೆ ಇದೆ. The Tourist Department will give all its attention to the development of tourism in Mysore State in years to come.

Mr. DEPUTY SPEAKER.—Now Question Hour is over.